Reg No. B G 155 24-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇಪಚ್ಚೆ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಆರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಲಂಡನ್ನಿನಲ್ಲಿ ಟ್ರೇಡ್ ಕಮೀಷನರ್ ನೇಮಕ ಕುರಿತು ನಿರ್ಧಾರವಿಲ್ಲ

ಪಾಕಿಸ್ಥಾನ ಪಡೆದಿರುವ ಆಯುಧಗಳು

ನವದೆಹಲಿ— 1965 ರ ಭಾರತ–ಪಾಕ್ ಯುದ್ಧಾನಂತರ ಪಾಕಿಸ್ಥಾನವು ವಿವಿಧ ದೇಶಗಳಿಂದ 700 ಮಿಲಿಯ ಡಾಲರುಗಳ ಶಸ್ತ್ರಾಸ್ತ್ರಗಳನ್ನು ಪಡೆದಿರುವುದಾಗಿ ಲೋಕ ಸಭೆಯಲ್ಲಿ ತಿಳಿಸಲಾಯಿತು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗಸೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೆಡೆಸೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವಷ್ಟೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

24 ಉಮೇದುವಾರರು

ನವದೆಹಲಿ— ರಾಷ್ಟ್ರಾಧ್ಯಕ್ಷತೆಗೆ 24 ಉಮೇದುವಾರರ ಪರ ಅರ್ಜಿ ಸಲ್ಲಿಸಲಾಗಿ – ತಾ || 29 ರವರೆಗೆ ವಾಪಸ್ಸು ತೆಗೆದು ಕೊಳ್ಳಬಹು – ಚುನಾವಣೆ ಆಗಸ್ಟ್ 16 ರಂದು.

★

ವಿದೇಶೀ ಹಣ

ನವದೆಹಲಿ— ದೇಶದ ಪ್ರಜಾಪ್ರಭುತ್ವ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ವರೂಪ ನಾಶಕ್ಕೆ ಭಾರತದಲ್ಲಿ ವಿದೇಶೀ ಹಣ ಕೆಲಸನಾಡುತ್ತಿದೆಯೆಂದು ಶ್ರೀ ಎಸ್ ಕೆ ಪಾಟೀಲರು ರೋಟರಿ ಕ್ಲಬ್‌ನಲ್ಲಿ ಹೇಳಿದರು – ಇದು ಬರುತ್ತಿರುವುದು ರಷ್ಯಾದಿಂಲೋ ಅಮೇರಿಕಾದಿಂದಲೋ ಎಂಬುದನ್ನು ಸರಕಾರ ಜನತೆಗೆ ತಿಳಿಸಬೇಕೆಂದರು.

★

ತಿರಸ್ಕಾರವೇ ?

ತಿರುವೆಂಗ್ರಂ— ಮುಖ್ಯ ಮಂತ್ರಿ ಶ್ರೀ ನಂಬೂದರಿಪಾದರು ರಾಜ್ಯಾಂಗ ನಾಶದ ಹೇಳಿಕೆ ಕುರಿತು ವಿವರ ಕೊಡಲು ಅವರಿಗೆ ಗೃಹಮಂತ್ರಿ ಶ್ರೀ ಚವಣರು ಆಹ್ವಾನಿಸಿರುವುದನ್ನು ತಿರಸ್ಕರಿಸಲಾಗುವುದೆಂದು ಮಾರ್ಕ್ಸಿಸ್ಟ್ ಮಾರ್ಟಿಯ ದೇಶಾಭಿಮಾನಿ ಪತ್ರಿಕೆ ಪ್ರಕಟಿಸಿದೆ.

★

ಪ್ರತಿಬಂಧಕವಿಲ್ಲ

ನವದೆಹಲಿ— ಕಮ್ಯೂನಿಸ್ಟ್ ಪಾರ್ಟಿ ನಿಷೇಧಕ್ಕೆ ಸರ್ಕಾರದ ಯಾವ ಕಾರ್ಯವೂ ಇಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಬಾಂಬುಗಳು ಸಿಕ್ಕಿದವು

ಗೌಹತಿ— ಮೆಲಗಾಂನಲ್ಲಿ ಒಬ್ಬ ಗೈಲ್ವೇ ನೌಕರನ ಮನೆಯಲ್ಲಿ 9 ಸಜೀವ ಬಾಂಬುಗಳು ಸಿಕ್ಕಿವೆ.

1 ಮೈಲಿ ರೇಸ್

ಲಂಡನ್— 1 ಮೈಲಿ ಓಡುವ ಜೂಜಿನಲ್ಲಿ ಜಾರ್ಜ್ ಕಿರ್ಕ್‌ಬ್ರಿಡ್ಜ್ 3 ನಿಮಿಷ 58 ಸೆಕೆಂಡುಗಳಲ್ಲಿ ಓಡಿ ಪ್ರಥಮ ಸ್ಥಾನ ಪಡೆದನು.

ಇದೊಂದು ಸ್ವಾರಸ್ಯ

ತಿರುವೆಂಡ್ರಂ— ಒಂದು ಖೂನಿ ಮೊಖದ್ದಮೆಯಲ್ಲಿ ಅಪರಾಧಿಯಾಗಿರುವ ಮಾರಕ್ಸಿಸ್ಟ್ ಚಂದ್ರನ್, ಪಾಲ್ಘಾಟಿನಲ್ಲಿ ಟ್ರಾಕ್ಟರ್ ವಿರುದ್ಧ ಚಳವಳಿ ಮುಂದಾಳತ್ವ ವಹಿಸಿದ್ದರು – ಉಪಕಾರಿ ಪೋಲೀಸು ಪಡೆ ಅವರ ಪ್ರಯತ್ನ ವಿಜಯಗೊಳ್ಳುವಂತೆ ಭರವಸೆ ಇತ್ತರು.

ಮಾರ್ಷಿಯಲ್ ಲಾ ಟೀಕಿಸಿದ್ದಕ್ಕೆ

ರಾವಲ್ಪಿಂಡಿ— ಮಾರ್ಷಿಯಲ್ ಲಾವನ್ನು ಟೀಕಿಸಿದ ಆಸಾದನೆಗೆ ಒಂದು ಪಾಕಿಸ್ಥಾನಿ ವಾರ್ತಪತ್ರಿಕೆ ಶಂಸುದೇಹೊ ಬಂಧಿಸಲ್ಪಟ್ಟರುವನು – ತಕ್ಷೀರು ಸ್ಥಾಪಿತವಾದರೆ, 10 ವರ್ಷಗಳ ವರೆಗೆ ಸಶ್ರಮ ಸಜಾ ವಿಧಿಸಲಾಗುವುದು.

ಭಾರತದ ದೂರು

ವಿಶ್ವಸಂಸ್ಥೆ— ಕಾಶ್ಮೀರದಲ್ಲಿ ಪಾಕಿಸ್ಥಾನವು ಚೀನಾ ಸಹಾಯದಿಂದ ರಸ್ತೆ ನಿರ್ಮಾಣ ಮಾಡುವದು ರಾಜಕೀಯ ದೃಷ್ಟಿಯಿಂದಾಗಿದೆಯೆಂದು ಭಾರತವು ವಿಶ್ವ ಸಂಸೆಗೆ ದೂರಿತ್ತಿದೆ.

ಇನ್ನೂ ನಿರ್ಧಾರವಿಲ್ಲ

ನವದೆಹಲಿ— ಮೈಸೂರು ಟ್ರೇಡ್ ಕಮಿಷನರ ಲಂಡನ್ ಆಫೀಸಿನ ಭವಿಷ್ಯ ಬಗ್ಗೆ ಏನೂ ನಿರ್ಧಾರವಾಗಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ತರಗತಿಗಳಿಗೆ ಬಹಿಷ್ಕಾರ

ಮಂಗಳೂರು— ಪ್ರಥಮ ವರ್ಷದ ಬಿಕಾಂ ಎರಡನೇ ಸೆಕ್ಷನ್ ತೆರೆಯಲು ಒತ್ತಾಯ ಮಾಡುವದಕ್ಕಾಗಿ, ಇಲ್ಲಿಯ ಸರಕಾರಿ ಕಾಲೇಜು ವಿದ್ಯಾರ್ಥಿಗಳ ತಮ್ಮ ತಮ್ಮ ತರಗತಿಗಳಿಗೆ ಬಹಿಷ್ಕಾರ ಹಾಕಿದ್ದಾರೆ.

ಗಗನಯಾನಿಗಳು ವಾಪಸ್ಸಾದರು

ಹೌಸ್ಟ್—ಅಮೇರಿಕಾ ಅಪೋಲೊ 11 ರಲ್ಲಿ ಚಂದ್ರನಲ್ಲಿಗೆ ತೆರಳಿದ್ದ 3 ಮಂದಿ ಗಗನಯಾನಿಗಳು, ಅಲ್ಲಿನ ಅಮೂಲ್ಯ ಬಂಡೆ ಮುಂತಾದವನ್ನೆಸೆ ನಿನ್ನೆ ರಾತ್ರಿ ಮಧ್ಯ ಪೆಸಿಫಿಕ್‌ನಲ್ಲಿ ಇಳಿದರು ಇವರು ಅಲ್ಲಿಂದ ಕ್ರಿಮಿಕೀಟ ಹೊಂದಿ ಇಲ್ಲಿ ಯಾವ ಭಯಂಕರ ಸಾಂಕ್ರಾಮಿಕ ರೋಗ ಹರಡಲು ಲು ಅವಕಾಶವಿಲ್ಲದಂತೆ 18 ದಿನಗಳು ಪ್ರತ್ಯೇಕವಾಗಿ ಇಡಲ್ಪಡುವರು.

★

ಸೌಜನ್ಯ ಫೋರಾವೊ

ತಿರುವೆಂಡ್ರಂ— ಕೇರಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ || ಅಯ್ಯಪ್ಪನವರನ್ನು ಫೋರಾವೋ ಮಾಡಿ ಅವರಿಗೆ ಕುರ್ಚಿ ಕೊಟ್ಟು ಕೂರಿಸಿ, ಸ್ಪೆಷಲ್ ಬಿ.ಎಸ್ಸಿ ಕೋರ್ಸ್ ಸಮಸ್ಯೆ ಬಗ್ಗೆ ಮಾತುಕತೆ ನಡೆಸಿ, ಪೋಲೀಸರು ಬರುವದಕ್ಕೆ ಮುಂಚೆ ಚದುರಿದರು.

★

ರಾಜ್ಯಗಳ ಬಡ್ಜೆಟ್

ನವದೆಹಲಿ— ಅಧಿಕೃತ ಅಂದಾಜಿನಂತೆ ಈಗಿವ ರಾಜ್ಯಗಳ ಬಡ್ಜೆಟ್‌ಗಳಲ್ಲಿ ಖೋತಾ ರೂ. 300 ಕೋಟಿಗೂ ಹೆಚ್ಚಾಗಿರುವದು ಕಂಡುಬಂದಿದೆ.

★

ಪಾಕಿಸ್ಥಾನಕ್ಕೆ ಸರಬರಾಜಿಲ್ಲ

ನವದೆಹಲಿ— ಅಮೇರಿಕಾ ಪಾಕಿಸ್ಥಾನಕ್ಕೆ ಟಿರ್ಕಿ ಮೂಲಕ 100 ಟ್ಯಾಂಕುಗಳನ್ನು ಮಾರುವದಿಲ್ಲವೆಂದು ತಿಳಿಸಿರುವದಾಗಿ ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ನವದೆಹಲಿ— ಕೇರಳ ಮುಖ್ಯ ನಂಬೂದರಿಪಾದರು ಮತ್ತು ಶ್ರೀ ಎ ಕೆ ಗೋಪಾಲ್ ಇತ್ತ 'ರಾಜ್ಯಾಂಗ ನಾಶ ಮಾಡುವ ಹೇಳಿಕೆ ಬಗ್ಗೆ ಲೋಕಸಭೆ ತುಂಬಾ ಗಲಾಟೆ ಚರ್ಚೆ ನಡೆಯಿತು.

ಆಚಾರ್ಯರ ಹೃದಯವಂತಿಕೆ

[' ಲೇಖನ ಕಾವೇರಿ " ಯಿಂದ]
(ಮುಂದುವರಿದುದು)

ಕಟ್ಟಕಡೆಗೆ ನಂಬಿ ರಾಮಾನುಜರ ಆಹ್ವಾನವನ್ನು ಒಪ್ಪಿಕೊಂಡನಾದರೂ " ನೋಡು, ನಾನು ದೇವರನ್ನು ಬಿಟ್ಟು ಬಹುಕಾಲ ದೂರವಿರುವಂತಿಲ್ಲ. ಎಷ್ಟು ಸಾಧ್ಯವೋ ಅಷ್ಟು ಬೇಗ ನಾನು ದೇವಾಲಯಕ್ಕೆ ಮರಳಬೇಕು " ಎಂದು ರಾಮಾನುಜರಿಗೆ ಎಚ್ಚರಿಸಿದ. ಆನಂದತುಂದಿಲರಾದ ರಾಮಾನುಜರು ಈ ಕರಾರಿಗೆ ಸಮ್ಮತಿಸಿದರು. ಮನೆಗೆ ಓಡಿದವರೇ ಹೆಂಡತಿಗೆ ಭಾಗವತರ ಆಗಮನದ ವಾರ್ತೆ ತಿಳಿಸಿ ಅವರನ್ನು ವಿಳಂಬಗೊಳಿಸದೆ ಸತ್ಕರಿಸಲು ಹೇಳಿದರು. ಸ್ವಲ್ಪ ಕಾಲ ಕಾದಮೇಲೆ ಕುತೂಹಲನಿಷ್ಠರಾದ ರಾಮಾನುಜರು ನಂಬಿಯನ್ನು ತಾವೇ ಕರೆದುಕೊಂಡುಬರಲು ದೇವಾಲಯಕ್ಕೆ ನಡೆದರು. ಆದರೆ ಬೇರೊಂದು ಮಾರ್ಗವಾಗಿ ಆ ವೇಳೆಗಾಗಲೇ ರಾಮಾನುಜರ ಮನೆಗೆ ಹೋಗಿದ್ದ ನಂಬಿ, ಅವರ ಪತ್ನಿಯನ್ನು ಆಹಾರ ಬಡಿಸುವಂತೆ ಕೇಳಿದ. ಪತಿಯ ಆಜ್ಞೆಯಂತೆ ಆಕೆ ನಂಬಿಗೆ ಸತ್ಕಾರ ಮಾಡಿದಳು. ಸದ್ದಿಲ್ಲದೆ ಸರಸರ ಊಟ ಮುಗಿಸಿ ನಂಬಿ ದೇವಾಲಯಕ್ಕೆ ಹಿಂತಿರುಗಿದ.

ಇದೇ ಸಮಯದಲ್ಲಿ ದೇವಾಲಯದಲ್ಲಿ ನಂಬಿಗಾಗಿ ಹುಡುಕುತ್ತಿದ್ದ ರಾಮಾನುಜರು ಕೊನೆಗೆ ಲಾಂಬಿಯಿಂದ ಮನೆಗೆ ಹಿಂತಿರುಗಿದರು. ಹಾಗೆ ಹಿಂತಿರುಗುವಾಗ ಕೂಡ ನಂಬಿಯ ಭೇಟಿ ಅವರಿಗಾಗಲಿಲ್ಲ. ಮನೆಗೆ ಹೋದಾಗ ಅವರಿಗೊಂದು ವಿಚಿತ್ರ ದೃಶ್ಯ ಕಾಣಿಸಿತು. ಅವರ ಮನೆಯ ಪಡಸಾಲೆಯನ್ನು ಸಗಣಿಹಾಕಿ ಸಾರಿಸಲಾಗಿತ್ತು : ಅವರ ಪತ್ನಿ ಕೂಡ ಸ್ನಾನಮಾಡಿ ಬರುತ್ತಿದ್ದಳು. ಇದರಿಂದ ಜಿಜ್ಞಾಸಗೊಂಡ ರಾಮಾನುಜರು ' ಇವೆಲ್ಲಾ ಏನು " ಎಂದು ಹೆಂಡತಿಯನ್ನು ಕೇಳಿದರು. ಆಕೆ ನಂಬಿ ಆಗಲೇ ಇಲ್ಲಿಗೆ ಬಂದಿದ್ದರು : ಅವರು ಅಬ್ರಾಹ್ಮಣರಾದ್ದರಿಂದ ಪಡಸಾಲೆಯಲ್ಲಿಯೇ ಅವರಿಗೆ ಬಡಿಸಿದೆ. ಭೋಜನವಾದಮೇಲೆ ಎಲೆ ಎತ್ತಿ, ಆ ಸ್ಥಳಕ್ಕೆ ಗೋಮಯ ಮಾಡಿ ಸ್ನಾನಮಾಡಿದೆ. ಅವರಿಗೆ ಬಡಿಸಿ ಉಳಿದಿದ್ದ ಆಹಾರ ಪದಾರ್ಥಗಳನ್ನೂ ಚೆಲ್ಲಿಬಿಟ್ಟೆ. ಈಗ ನಮಗೆ ಮತ್ತೆ ಅಡಿಗೆ ಮಾಡಬೇಕು " ಎಂದು ಶಾಂತವಾಗಿ ಹೇಳಿದಳು. ತಬ್ಬಿಬ್ಬಾದ ರಾಮಾನುಜರು ' ಅಯ್ಯೋ ಎಂಥಾ ತಪ್ಪು ಮಾಡಿದೆ ನೀನು, ಪರಮ ಭಾಗವತನೊಬ್ಬನನ್ನು ಅವಮಾನಗೊಳಿಸಿದ್ದಲ್ಲದೆ ಆತ ಬಿಟ್ಟ ಪ್ರಸಾದವನ್ನು ಭುಂಜಿಸಿ ಪುನೀತನಾಗಬೇಕೆಂದಿದ್ದ ನನ್ನ ಆಸೆಯನ್ನೂ ಭಗ್ನಗೊಳಿಸಿಬಿಟ್ಟೆಯಲ್ಲಾ " ಎಂದವರೇ ಒಡನೆ ಸಂನ್ಯಾಸ ಸ್ವೀಕರಿಸಿದರು.



Protect the Cow

ಗೋರಕ್ಷಣೆಗೆ ಹೆಂಚಲು ನೀಡಿ

SHAKTI SUDHA

A Superb Tonic

ವುಡ್‌ಲಾಂಡ್ ಶಿನಿ 25-7-69 ರಿಂದ ಅಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮಾನ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ ಅಮೋಘ 3 ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು

Golden Jubilee of 'Satyavadi'

The golden jubilee of the ' Satyavadi ' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimhaiyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S Krishna Rao (Proprietor) at the Satyavadi Press Chamarajapuram, Mysore 4